O.S.No.: 79/2009
P.W.:1

ಈ ದಿನ ದಿಃ 07-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿ ವಾದಿ 2 ಮತ್ತು 3 ರವರ ಪರ ವಕೀಲರಿಂದಃ

ನನಗೆ 65 ವರ್ಷ ವಯಸ್ಸು. 1 ನೇ ಪ್ರತಿವಾದಿ ನನ್ನ ತಾಯಿ. 2 ಮತ್ತು 3 ನೇ ಪ್ರತಿವಾದಿಯರು ನನ್ನ ಅಕ್ಕ ತಂಗಿಯರು. ನನ್ನ ತಂದೆಯ ಆಸ್ತಿಯಲ್ಲಿ ಪಾಲು ಬೇಕೆಂದು ಈ ದಾವೆ ಹಾಕಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ.265. ಸದರಿ ಜಮೀನು 4 ಎಕರೆ 14 ಗುಂಟೆ ಇದೆ. ನನ್ನ ತಂದೆ ಕೆಂಪಯ್ಯ ಎಂದರೆ ಸರಿ. ನನ್ನ ತಂದೆ ತೀರಿಕೊಂಡಾಗ ನನಗೆ 10 ವರ್ಷ ವಯಸ್ಸು. ನನ್ನ ಅಕ್ಕ ಅಮ್ಮಯ್ಯಮ್ಮ ಅವರ ಮಕ್ಕಳು ಚಿಕ್ಕ ವಯಸ್ಸಿನಲ್ಲಿರುವಾಗ ತೀರಿಕೊಂಡಿರುತ್ತಾರೆ. ನನ್ನ ಅಕ್ಕನಿಗೆ ಯಾವ ವಯಸ್ಸಿನಲ್ಲಿ ಮದುವೆಯಾಗಿರುತ್ತದೆಂದು ನನಗೆ ತಿಳುವಳಿಕೆ ಇಲ್ಲ. ನನ್ನ ಅಕ್ಕನ ಗಂಡನ ಹೆಸರು ಮರಿಯಪ್ಪ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬದ ವ್ಯವಹಾರವನ್ನು ನಮ್ಮ ತಾಯಿ ನೋಡುತ್ತಿದ್ದರು ಎಂದರೆ ಸರಿ. ನನ್ನ ತಾಯಿ ನನ್ನನ್ನು ಕೂಲಿ ನಾಲಿ ಮಾಡಿ ಸಾಕಿರುತ್ತಾರೆಂದರೆ ಸರಿ. ನನ್ನ ತಂದೆ ಜೀವಂತವಿದ್ದಾಗ ಅವರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬವನ್ನು ನನ್ನ ಅಕ್ಕನ ಗಂಡನಾದ ಮರಿಯಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಬೇರೆ ವಾಸವಿದ್ದರು ಎಂದು ನುಡಿಯುತ್ತಾರೆ.

ನನ್ನ ಮದುವೆಯ ಖರ್ಚನ್ನು ಮರಿಯಪ್ಪನೇ ಭರಿಸಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆಯಾಗಿ ಎಷ್ಟು ವರ್ಷ ಆಗಿದೆ ಎಂದು ತಿಳುವಳಿಕೆ ಇಲ್ಲ. ನನ್ನ ತಾಯಿ ಮತ್ತು ನನ್ನ ಅಕ್ಕನ ಗಂಡ ಒಂದೇ ಗ್ರಾಮದವರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ ದಾವಾ ಆಸ್ತಿಯನ್ನು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಆಗ ನಾವು ಚಿಕ್ಕ ಮಕ್ಕಳು ಎಂದರೆ ಸರಿ. ದಾವಾ ಸ್ವತ್ತನ್ನು ನನ್ನ ತಾಯಿಯೇ ಅರ್ಜಿ ಹಾಕಿ ಅವರ ಪರವಾಗಿ ಮಾಡಿಸಿಕೊಂಡಿರುತ್ತಾರೆಂದರೆ ಸಾಕ್ಷಿಯು ನನ್ನ ತಂದೆ ಇದ್ದಾಗಲೇ ನಾವು ಜಮೀನನ್ನು ಮಾಡುತ್ತಿದ್ದೆವು ಆನಂತರ ನನ್ನ ತಾಯಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನತಂದೆ ಕಾಲದಲ್ಲಿ ಜಮೀನನ್ನು ಉಳುಮೆ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನನ್ನು ಬೆಂಗಳೂರಿಗೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದರು. ನನಗೆ ಇಬ್ಬರು ಗಂಡು ಮಕ್ಕಳು. ನನ್ನ ಇಬ್ಬರು ಗಂಡು ಮಕ್ಕಳಲ್ಲಿ ಒಬ್ಬರು ತೀರಿಕೊಂಡಿರುತ್ತಾರೆ. ನನ್ನ ತಾಯಿ ಮತ್ತು ನನ್ನ ಅಕ್ಕ ಊರಿನಲ್ಲಿ ಜೊತೆಯಲ್ಲಿ ಇದ್ದರು ಎಂದರೆ ಸರಿ. ನನ್ನ ತಾಯಿಯ ಯೋಗಕ್ಷೇಮವನ್ನು ನನ್ನ ಮದುವೆಯ ನಂತರ ನನ್ನ ಅಕ್ಕ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯು ಸರ್ಕಾರದಿಂದ ಮಂಜೂರಾದ ದಾಖಲೆಗಳು ನನ್ನ ತಾಯಿ ಹೆಸರಿಗೆ ಬಂದಿರುತ್ತವೆಂದರೆ ಸರಿ. ನನ್ನ ತಾಯಿಯ ಆರೋಗ್ಯವನ್ನು ಮರಿಯಪ್ಪ ನೋಡಿಕೊಂಡಿದ್ದರಿಂದ ಹಾಗೂ ನನ್ನ ಮದುವೆಯ ಖರ್ಚನ್ನು ಭರಿಸಿದ್ದರಿಂದ ನನ್ನ ತಾಯಿ ಆತನ ಹೆಸರಿಗೆ ತಹಶೀಲ್ದಾರ್ ರವರ ಮುಂದೆ ಹೇಳಿಕೆ ಮುಖಾಂತರ ಖಾತೆ ಬದಲಾವಣೆ ಮಾಡಿಸಿರುತ್ತಾರೆಂದರೆ ಸರಿಯಲ್ಲ. ಹಾಗಾಗಿ 1980-81 ರಿಂದ 1998-99 ನೇ ಸಾಲಿನ ವರೆಗೂ ಅವರ ಹೆಸರಿನಲ್ಲೇ ಖಾತೆ ಪಹಣಿ ಬಂದಿರುತ್ತದೆ ಎಂದರೆ ಸರಿಯಲ್ಲ. ಆನಂತರ 2 ಮತ್ತು 3 ನೇ ಪ್ರತಿವಾದಿಯರು ದಾವಾ ಆಸ್ತಿಯನ್ನು ತಮ್ಮ ನಡುವೆ ತಲಾ 1 ಎಕರೆ 38 ಗುಂಟೆಯಂತೆ ಭಾಗ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಅದರಂತೆ ಸದರಿಯವರ ಹೆಸರಿನಲ್ಲಿ ಖಾತೆ ಬಂದಿರುತ್ತದೆಂದರೆ ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕಾರ 2 ಮತ್ತು 3 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಕೃಷಿ ಮಾಡುತ್ತಿರುತ್ತಾರೆಂದರೆ ಸಾಕ್ಷಿಯು ನಾನು ಮಾಡುತ್ತಿರುತ್ತೇನೆ ಎನ್ನುತ್ತಾರೆ. ನಾನು ಎಷ್ಟು ಎಕರೆ ಕೃಷಿ ಮಾಡುತ್ತಿರುತ್ತೇನೆಂದರೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾದ ಕಾರಣ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ದಿಃ27-6-1983 ರಲ್ಲಿ 1 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಹಕ್ಕುಪತ್ರ ಬಂದಿರುತ್ತದೆಂದರೆ ಸರಿಯಲ್ಲ. ಸದರಿ ಹಕ್ಕುಪತ್ರ ಕೊಟ್ಟಾಗ ನಾನು ಬೆಂಗಳೂರಿನಲ್ಲಿದ್ದೇನು ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ತಂದೆಯ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಯೋಗಕ್ಷೇಮವನ್ನು ನಾನು ಎಂದಿಗೂ ನೋಡಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯು ಈಗ

ನನ್ನ ಅಕ್ಕನ ಮನೆಯಲ್ಲಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರಿದು ಇಬ್ಬರ ಮನೆಯಲ್ಲಿಯೂ 1 ನೇ ಪ್ರತಿವಾದಿ ಇರುತ್ತಾರೆಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಒಂದನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.